VISVESVARAYA TECHNOLOGICAL UNIVERSITY
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"Jnana Sangama", Belagavi - 590 018, Karnataka State, INDIA
Phone : (0831) 2405468
Fax : (0831) 2405467
Email : registrar@vtu.ac.in
website : www.vtu.ac.in

ಡಾ.ಆನಂದ.ಎಸ್.ದೇಶಪಾಂಡೆ. ಬಿ.ಇ., ಎಂ.ಟೆಕ್.,ಪಿಹೆಚ್.ಡಿ
ಕುಲಸಚಿವರು

ದೂರವಾಣಿ ಸಂ: (0831)2405468
ಫ್ಯಾಕ್ಸ್.ಸಂ: (0831) 2405467

ಉಲ್ಲೇಖ : ವಿತಾವಿ/ಬೆಳಗಾವಿ/ಪ್ರಸಾರಾಂಗ/2020-21/ 5566 ದಿನಾಂಕ : 30 JAN 2021

ನೆನಪೋಲೆ

ಇವರಿಗೆ-
ಪ್ರಾಂಶುಪಾಲರು
ವಿತಾವಿಯ ಸಂಯೋಜಿತ/ಸ್ವಾಯತ್ತ/ಘಟಕ ಕಾಲೇಜುಗಳು.

ವಿಷಯ:- ನಮ್ಮ ವಿಶ್ವವಿದ್ಯಾಲಯದಿಂದ ಪ್ರಕಟಿಸಿರುವ "ಸಾಂಸ್ಕೃತಿಕ ಕನ್ನಡ ಮತ್ತು ಬಳಕೆ ಕನ್ನಡ ಪಠ್ಯಪುಸ್ತಕಗಳನ್ನು ಖರೀದಿಸುವ" ಕುರಿತು-

ಉಲ್ಲೇಖ:-1) ವಿತಾವಿ/ಬೆಳಗಾವಿ/ಪ್ರಸಾರಂಗ/2020-21/ 4026 ದಿನಾಂಕ 01-12-2020

ಮಾನ್ಯರೆ,

ಮೇಲ್ಕಾಣಿಸಿದ ವಿಷಯದನ್ವಯ ವೃತ್ತಿಪರ ಶಿಕ್ಷಣದಲ್ಲಿ (ಇಂಜಿನಿಯರಿಂಗ್ ವಿಭಾಗ) ಕನ್ನಡವನ್ನು ಕಡ್ಡಾಯವಾಗಿ ಬೋಧಿಸುವ ಸಲುವಾಗಿ ಘನ ಸರ್ಕಾರದ ಆದೇಶದ ಮೇರೆಗೆ ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯು, ಪ್ರಸಾರಂಗದ ಮೂಲಕ ಸಾಂಸ್ಕೃತಿಕ ಕನ್ನಡ (ಕನ್ನಡ ಬಲ್ಲವರಿಗೆ) ಹಾಗೂ ಬಳಕೆ ಕನ್ನಡ (ಕನ್ನಡ ಕಲಿಯದವರಿಗೆ) ಅಧ್ಯಯನಕ್ಕೆಂದು 2ನೇ ಸೆಮೆಸ್ಟರ್ ಬಿ.ಆರ್ಕಿಟೆಕ್ಚರ್, ಮತ್ತು 3/4 ನೇ ಸೆಮೆಸ್ಟರ್ ಬಿ.ಇ/ಬಿ.ಟೆಕ್/ಬಿ.ಪ್ಲಾನ್ ಗೆ 2018 ರ ಯೋಜನೆ ಪ್ರಕಾರ ಸದರಿ ಪುಸ್ತಕಗಳನ್ನು ಸಿದ್ದಪಡಿಸಿ ಪ್ರಕಟಗೊಳಿಸಿದೆ. ಈ ಪಠ್ಯಪುಸ್ತಕಗಳು ಕಡ್ಡಾಯವಾಗಿದ್ದು ನಿಮ್ಮ ಕಾಲೇಜುಗಳಲ್ಲಿ ಇರುವ ವಿದ್ಯಾರ್ಥಿಗಳ ನೊಂದಣಿಗೆ (registration) ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಿದಲು ಮೇಲಿನ ಉಲ್ಲೇಖದನ್ವಯ ಆದೇಶಿಸಲಾಗಿತ್ತು. ಆದರೆ ಇನ್ನೂ ಹಲವಾರು ಕಾಲೇಜುಗಳು ಪುಸ್ತಕಗಳನ್ನು ಖರೀದಿಸಿರುವುದಿಲ್ಲ ಅದಕ್ಕಾಗಿ ಈ ನೆನಪೋಲೆಯನ್ನು ಸಂಬಂದಪಟ್ಟ ಕಾಲೇಜುಗಳ ಗಮನಕ್ಕೆ ತರಲಾಗುತ್ತಿದೆ.

ಸಾಂಸ್ಕೃತಿಕ ಕನ್ನಡ ಪುಸ್ತಕ ಪ್ರತಿ ಒಂದರ ಬೆಲೆ ರೂ.೬೦/-
ಬಳಕೆ ಕನ್ನಡ ಪುಸ್ತಕ ಪ್ರತಿ ಒಂದರ ಬೆಲೆ ರೂ. ೬೦/- ಆಗಿರುತ್ತದೆ.

ಸದರಿ ಪುಸ್ತಕಗಳನ್ನು ಖರೀದಿಸಲು ವಿತಾವಿಯ ವೆಬಸೈಟ್ https://prasaranga.vtu.ac.in ಇಲ್ಲಿ ಆಯಾ ಕಾಲೇಜಿನ ಪ್ರಾಂಶುಪಾಲರುಗಳು ಪರೀಕ್ಷಾ ಕೆಲಸಕ್ಕೆ ಬಳಸುವ ಕ್ರೆಡೆನ್ಸಿಯಲ್ ಮೂಲಕ ಲಾಗಿನ್ ಆಗಿ ಖರೀದಿಸಬೇಕು. ದಿನಾಂಕ 10-02-2021 ರ ಒಳಗೆ ಎಸ್.ಬಿ.ಐ. ಕಲೆಕ್ಟ್ ಮುಖಾಂತರ Prasaranga-Kannada Text Books ಹೆಡ್‌ನ್ನು ಆಯ್ಕೆ ಮಾಡಿ ಹಣವನ್ನು ಆನ್‌ಲೈನ್ ಮುಖಾಂತರ ಪಾವತಿಸಬೇಕು. ಡಿ.ಡಿ/ಚೆಕ್ ಗಳನ್ನು ಸ್ವೀಕರಿಸಲಾಗದು. ಹಣತುಂಬಿದ ನಂತರ ಹಣ ಪಾವತಿಸಿದ ಮಾಹಿತಿಯನ್ನು ಪೋರ್ಟಲ್‌ನಲ್ಲಿ ದಾಖಲಿಸಬೇಕು. ಇದಾದನಂತರ ವಿತಾವಿಯಿಂದ ಪುಸ್ತಕಗಳನ್ನು ಕಾಲೇಜಿಗೆ ಕಳುಹಿಸಿಕೊಡಲಾಗುವುದು.

ಸದರಿ ಪುಸ್ತಕಗಳ ಕುರಿತಾದ ಮಾಹಿತಿಗೆ ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು – 9731220016.

ಧನ್ಯವಾದಗಳೊಂದಿಗೆ.

29.01.2021
ಕುಲಸಚಿವರು

ಪ್ರತಿ

1) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು,ವಿತಾವಿ ಇವರ ದಯಾಪರ ಅವಗಾಹಣೆಗೆ
2) ಕುಲಸಚಿವರ ಆಪ್ತ ಕಾರ್ಯದರ್ಶಿಗಳು ವಿತಾವಿ ಇವರ ದಯಾಪರ ಅವಗಾಹಣೆಗೆ
3) ಕುಲಸಚಿವರು (ಪರೀಕ್ಷಾಂಗ) ವಿತಾವಿ ಇವರ ದಯಾಪರ ಅವಗಾಹಣೆಗೆ
4) ಹಣಕಾಸು ಅಧಿಕಾರಿಗಳು ವಿತಾವಿ ಇವರ ದಯಾಪರ ಅವಗಾಹಣೆಗೆ
5) ವಿಶೇಷ ಅಧಿಕಾರಿಗಳು ಸಿ.ಎನ್.ಸಿ ವಿಭಾಗ ವಿತಾವಿ ಇವರ ಅವಗಾಹಣೆಗೆ